ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು 560001.

ಸಂಖ್ಯೆ:ಸಿ7(8) ಆರ್.ಟಿ.ಇ/2022-23 ದಾ.ಪ್ರ-60/2021-22 ದಿನಾಂಕ:24.12.2021

## ::ಸುತ್ತೋಲೆ::

ವಿಷಯ: 2022-23ನೇ ಸಾಲಿಗೆ ಶಿಕ್ಷಣ ಹಕ್ಕು ಕಾಯಿದೆ 2009ರ ಸೆಕ್ಷನ್12 (1) (ಬಿ) ಮತ್ತು 12 (1) (ಸಿ) ಅಡಿ ಪ್ರವೇಶ ಪ್ರಕ್ರಿಯೆಗೆ ಗ್ರಾಮ/ವಾರ್ಡ್‌ಗಳಲ್ಲಿನ ಎಲ್ಲಾ ಶಾಲೆಗಳನ್ನು ಮ್ಯಾಪಿಂಗ್ ಮಾಡುವ ಕುರಿತು

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ:ಇಡಿ 101 ಪಿಜಿಸಿ 2019 ದಿನಾಂಕ:27.02.2019

@@@@@

2022-23ನೇ ಸಾಲಿನಲ್ಲಿ ಶಿಕ್ಷಣ ಹಕ್ಕು ಕಾಯಿದೆಯ ಸೆಕ್ಷನ್ 12(1) (ಬಿ) ಮತ್ತು 12(1) (ಸಿ) ಅಡಿ ಪ್ರವೇಶ ಪ್ರಕ್ರಿಯೆಗೆ ಉಲ್ಲೇಖಿತ ಆದೇಶದಲ್ಲಿ ನೆರೆಹೊರೆಯ ಪ್ರದೇಶದ ಮಿತಿಯನ್ನು ಈ ಕೆಳಗಿನಂತೆ ಗುರುತಿಸಲಾಗಿದೆ.

1. ಗ್ರಾಮೀಣ ಪ್ರದೇಶಗಳಲ್ಲಿ ಸಂಬಂಧಿಸಿದ ಕಂದಾಯ ಗ್ರಾಮದ ಭೌಗೋಳಿಕ ಗಡಿ
2. ನಗರಸಭೆ, ಟೌನ್ ಮುನಿಸಿಪಲ್ ಕೌನ್ಸಿಲ್ ಮತ್ತು ಪಟ್ಟಣ ಪಂಚಾಯಿತಿಯ ಭೌಗೋಳಿಕ ಗಡಿ
3. ಮಹಾನಗರ ಪಾಲಿಕೆಗಳು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರತಿ ವಾರ್ಡ್‌ನ ಭೌಗೋಳಿಕ ಗಡಿ

ಆರ್.ಟಿ.ಇ ಕಾಯಿದೆಯಡಿಯಲ್ಲಿನ ಅವಕಾಶಗಳಂತೆ 25% ಸೀಟುಗಳನ್ನು ಹಂಚಿಕೆ ಮಾಡಲು ಅರ್ಹ ಅನುದಾನಿತ ಮತ್ತು ಅನುದಾನರಹಿತ ಶಾಲೆಗಳನ್ನು ಗುರುತಿಸಲು ಪ್ರಕ್ರಿಯೆಯಡಿಯಲ್ಲಿ ರಾಜ್ಯದಲ್ಲಿನ ಎಲ್ಲಾ ಸರ್ಕಾರಿ ಶಾಲೆಗಳು, ಅನುದಾನಿತ ಶಾಲೆಗಳು ಮತ್ತು ಅನುದಾನರಹಿತ ಶಾಲೆಗಳನ್ನು ಮೇಲ್ಕಂಡಂತೆ ಆ ಶಾಲೆಗಳು ಇರುವಂತಹ ಭೌಗೋಳಿಕ ಪ್ರದೇಶಕ್ಕೆ ಮ್ಯಾಪಿಂಗ್ ಮಾಡುವ ಅಗತ್ಯವಿದೆ. ಇದಕ್ಕಾಗಿ ಮೇಲ್ಕಂಡಂತೆ ಹಿಂದಿನ ಸಾಲಿನಲ್ಲಿ ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳು ಆರ್.ಟಿ.ಇ ದಾಖಲಾತಿ ತಂತ್ರಾಂಶದಲ್ಲಿ ದಾಖಲಿಸಿದ್ದ ಕಂದಾಯ ಗ್ರಾಮಗಳು, ನಗರಸಭೆ, ಟೌನ್ ಮುನಿಸಿಪಲ್ ಕೌನ್ಸಿಲ್, ಪಟ್ಟಣ ಪಂಚಾಯಿತಿ ಹಾಗೂ ಮಹಾನಗರ ಪಾಲಿಕೆ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗಳ ಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ. ಇದರೊಂದಿಗೆ 2021-22ನೇ ಸಾಲಿನ ಡಿಸೆಂಬರ್-31ರಲ್ಲಿರುವಂತೆ ಸ್ಯಾಟ್ಸ್ ತಂತ್ರಾಂಶದಲ್ಲಿನ ಪ್ರವೇಶ ತರಗತಿಗೆ (1ನೇ ತರಗತಿ ಅಥವಾ ಎಲ್.ಕೆ.ಜಿ) ದಾಖಲಾಗಿರುವ ಮಕ್ಕಳ ಸಂಖ್ಯೆಯನ್ನು ಒದಗಿಸಲಾಗಿದೆ. ಈ ವಿವರಗಳನ್ನು ಕ್ಷೇತ್ರಶಿಕ್ಷಣಾಧಿಕಾರಿಗಳು ಪರಿಶೀಲಿಸಿ ಕೆಳಕಂಡಂತೆ ಪರಿಷ್ಕರಿಸಲು ದಿನಾಂಕ:03.01.2022 ರಿಂದ ದಿನಾಂಕ:12.01.2022ರವರೆಗೆ ತಂತ್ರಾಂಶವನ್ನು ಬಿಡುಗಡೆ ಮಾಡಲಾಗಿದೆ.

1. ತಂತ್ರಾಂಶವನ್ನು www.schooleducation.kar.nic.in ನಲ್ಲಿ ಇತ್ತೀಚಿನ ಮಾಹಿತಿಗಳು RTE School Mapping Moduleರಲ್ಲಿ ಎಂಬ ವಿವರದಡಿಯಲ್ಲಿ ಪಡೆಯಬಹುದಾಗಿದೆ. ಅಥವಾ ಇಲಾಖೆಯ ಇದೇ ವೆಬ್‌ಸೈಟಿನ e-Gov.Software Engineering Servicesರಲ್ಲಿ RTE Admission Software ಆಯ್ಕೆ ಮಾಡಿಕೊಂಡು ಇದರಲ್ಲಿ Administratorsಗೆ ಹೋದಲ್ಲಿ ಕ್ಷೇತ್ರಶಿಕ್ಷಣಾಧಿಕಾರಿಗಳು ತಮ್ಮ username ಮತ್ತು password ದಾಖಲಿಸಿ ಲಾಗಿನ್ ಆಗಬಹುದಾಗಿದೆ. (User Manual ಕಳುಹಿಸಲಾಗುವುದು)
2. ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು username ಮತ್ತು password ಗಳನ್ನು ಇಲಾಖೆಯು ನೀಡಿರುವ ಮೊಬೈಲ್ ಸಂಖ್ಯೆಗೆ ದಿನಾಂಕ:03.01.2022ರಂದು ಮತ್ತೊಮ್ಮೆ ಕಳುಹಿಸಲಾಗುವುದು. ಇದನ್ನು ಬಳಸಿ ಮೇಲ್ಕಂಡಂತೆ ಲಾಗಿನ್ ಆಗಬಹುದಾಗಿದೆ.
3. Administratorsನಲ್ಲಿ ಕೆಳಕಂಡಂತೆ ಮೂರು ಮಾಡ್ಯೂಲ್‌ಗಳಿದ್ದು ಇವುಗಳನ್ನು ಪರಿಶೀಲಿಸಿ ತಮ್ಮ ತಾಲ್ಲೂಕಿನ ಗ್ರಾಮಗಳು/ಯು.ಎಲ್.ಬಿ/ವಾರ್ಡ್‌ಗಳ ವಿವರಗಳನ್ನು ಅಪ್‌ಡೇಟ್ ಮಾಡಿ ಶಾಲೆಗಳನ್ನು ಮ್ಯಾಪಿಂಗ್ ಮಾಡಬೇಕು.
   a) Correction of Villages/Wards/ULB and pincodes.
   b) Creation of habitations/area or locality under villages/wards/ULB
   c) School mapping and uploading of documents for minority schools.
4. ಶಾಲೆಗಳ ಪ್ರವೇಶ ತರಗತಿಯನ್ನು ಸ್ಯಾಟ್ಸ್ ತಂತ್ರಾಂಶದಲ್ಲಿ ದಿನಾಂಕ:31.12.2021ರಲ್ಲಿ ಇರುವಂತೆ ಆರ್.ಟಿ.ಇ ತಂತ್ರಾಂಶದಲ್ಲಿ ತೋರಿಸಲಾಗಿದೆ. 1ನೇ ತರಗತಿಯ ದಾಖಲಾತಿಯನ್ನು ಬದಲಾವಣೆ ಮಾಡಲು ತಂತ್ರಾಂಶದಲ್ಲಿ ಅವಕಾಶ ನೀಡಿರುವುದಿಲ್ಲ. ಆದರೆ ಎಲ್.ಕೆ.ಜಿ ತರಗತಿಯ ದಾಖಲಾತಿಯಲ್ಲಿ ಬದಲಾವಣೆಗಳು ಇದ್ದಲ್ಲಿ ಅಪ್‌ಡೇಟ್ ಮಾಡುವುದು ಪ್ರತಿಯೊಂದು ಶಾಲೆಯ ಪ್ರವೇಶ ತರಗತಿಯನ್ನು ಸರಿಯಾಗಿ ನಮೂದಿಸುವುದು ಕ್ಷೇತ್ರಶಿಕ್ಷಣಾಧಿಕಾರಿಗಳ ಕರ್ತವ್ಯವಾಗಿದೆ.
5. ಯಾವುದೇ ಕಾರಣಕ್ಕೂ ಗ್ರಾಮಗಳು/ಯು.ಎಲ್.ಬಿ/ವಾರ್ಡ್‌ಗಳನ್ನು ಸೇರಿಸುವಲ್ಲಿ ಹಾಗೂ ತೆಗೆದುಹಾಕುವಲ್ಲಿ ಅಥವಾ ಶಾಲೆಗಳ ಪ್ರವೇಶ ತರಗತಿಯಲ್ಲಿನ ಸಂಖ್ಯೆಯನ್ನು ನಮೂದಿಸುವಲ್ಲಿ ಅಥವಾ ಎಲ್.ಕೆ.ಜಿ ಮಕ್ಕಳ ದಾಖಲಾತಿ ಸಂಖ್ಯೆಯನ್ನು ನಮೂದಿಸುವಲ್ಲಿ ಆಗುವಂತಹ ತಪ್ಪುಗಳಿಗೆ ಕ್ಷೇತ್ರಶಿಕ್ಷಣಾಧಿಕಾರಿಗಳನ್ನು ನೇರವಾಗಿ ಹೊಣೆಗಾರರನ್ನಾಗಿ ಮಾಡಲಾಗುವುದು.

ಮೇಲ್ಕಂಡ ಪ್ರಕ್ರಿಯೆಯನ್ನು ದಿನಾಂಕ:12.01.2022ರೊಳಗೆ ಪೂರ್ಣಗೊಳಿಸಲು ಸೂಚಿಸಿದೆ. ಯಾವುದೇ ಕಾರಣಕ್ಕೂ ದಿನಾಂಕದ ವಿಸ್ತರಣೆಗೆ ಹಾಗೂ ಮುಂದಿನ ದಿನಗಳಲ್ಲಿ ಯಾವುದೇ ತಿದ್ದುಪಡಿಗೆ ಅವಕಾಶವಿರುವುದಿಲ್ಲ. 2022-23ನೇ ಸಾಲಿನ ಸದರಿ ದಾಖಲಾತಿ ಪ್ರಕ್ರಿಯೆ ಕುರಿತು ಮೇಲ್ಕಂಡಂತೆ ಪ್ರಕ್ರಿಯೆಗಳನ್ನು ವಿಸ್ತಾರವಾಗಿ ಮಂಡಿಸಲು ಹಾಗೂ ಮುಂದಿನ ಪ್ರಕ್ರಿಯೆಗಳಿಗೆ ಮಾಡಿಕೊಳ್ಳಬೇಕಾದ ಸಿದ್ಧತೆಗಳನ್ನು ಚರ್ಚಿಸಲು ದಿನಾಂಕ:10.01.2021ರಂದು ಬೆಳಿಗ್ಗೆ 11.00 ಗಂಟೆಗೆ ಎಲ್ಲಾ ಉಪನಿರ್ದೇಶಕರು(ಆಡಳಿತ), ಕ್ಷೇತ್ರಶಿಕ್ಷಣಾಧಿಕಾರಿಗಳು, ಜಿಲ್ಲಾ ಆರ್.ಟಿ.ಇ ನೋಡಲ್ ಅಧಿಕಾರಿಗಳು ಹಾಗೂ ತಾಲ್ಲೂಕು ಆರ್.ಟಿ.ಇ ನೋಡಲ್ ಅಧಿಕಾರಿಗಳಿಗೆ ಜೂಮ್ ಮೀಟಿಂಗ್‌ನ್ನು ಆಯೋಜಿಸಲಾಗಿದ್ದು, ಈ ಸಂಬಂಧ ಹಿಂದಿನ ದಿನ ಲಿಂಕ್‌ನ್ನು ಹಂಚಿಕೊಳ್ಳಲಾಗುವುದು.

ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)

24/12/21

ಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ(ಉಪನಿರ್ದೇಶಕರು(ಆಡಳಿತ) ಇವರ ಮುಖಾಂತರ ಸೂಕ್ತ ಕ್ರಮಕ್ಕಾಗಿ.
3. ಹಿರಿಯ ಸಹಾಯಕ ನಿರ್ದೇಶಕರು/ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ಸೂಕ್ತ ಕ್ರಮಕ್ಕಾಗಿ.

ಮಾಹಿತಿಗಾಗಿ:

1) ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ ಮಾನ್ಯರ ಅವಗಾಹನೆಗೆ ಸಲ್ಲಿಸಲು ಕೋರಿದೆ.
2) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾಂ ವಿಭಾಗ, ಕಲಬುರಗಿ ವಿಭಾಗ ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.